◆ **ನೀವು ಸಂಶೋಧನಾ ಕ್ಷೇತ್ರದತ್ತ ಆಸಕ್ತರಾಗಲು ಪ್ರೇರಣೆಯಾದ ಸಂಗತಿಗಳೇನು?**

ತಂದೆ ಬಿಎಸ್‌ಎನ್‌ಎಲ್ ಉದ್ಯೋಗಿಯಾಗಿದ್ದರು. ತಾಯಿ ಸರ್ಕಾರಿ ಶಾಲೆ ಟೀಚರ್ ಆಗಿದ್ದರು. (ಇಬ್ಬರೂ ಈಗ ನಿವೃತ್ತರಾಗಿದ್ದಾರೆ.) ಯಾವತ್ತೂ, ಯಾರೂ ಓದಬೇಡ ಎಂದು ಹೇಳುತ್ತಿರಲಿಲ್ಲ. ಮೊಲಿನಿಂದಲೂ ಪುಸ್ತಕಗಳನ್ನು ಓದುವ ಅಭ್ಯಾಸ ತುಂಬ ಇತ್ತು. ನನ್ನ ದೊಡ್ಡಪ್ಪನ ಸರ್ಕ್ಯುಲೇಟಿಂಗ್ ಲೈಬ್ರರಿ ಇತ್ತು. ಅದರಲ್ಲಿ ಕೂತು ಓದುತ್ತಿದ್ದೆ; ಮನೆಗೂ ಪುಸ್ತಕಗಳನ್ನು ತಂದುಕೊಂಡು ಓದುತ್ತಿದ್ದೆ.

ಹತ್ತನೇ ತರಗತಿ ದಾಟಿದ ಮೇಲೆ ಒಂದು ಪುಸ್ತಕದ ಅಡಿಟಿಪ್ಪಣಿಯಲ್ಲಿ ಸೂಚಿಸಲಾಗುವ ಇತರ ಆಧಾರಗ್ರಂಥಗಳನ್ನು ಹುಡುಕಿಕೊಂಡು ಹೋಗುವ ಅಭ್ಯಾಸ ಶುರುವಾಯ್ತು. ನನ್ನ ಇನ್ನೊಬ್ಬ ದೊಡ್ಡಪ್ಪ ಕೃಷ್ಣಮೂರ್ತಿ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರಿಗೆ ಆಪ್ತರಾಗಿದ್ದರು. ಅವರು ನನ್ನನ್ನು ಮೈಸೂರಿಗೆ ಕರೆದುಕೊಂಡು ಹೋಗಿ, ವೆಂಕಟಾಚಲಶಾಸ್ತ್ರಿಗಳ ತೆಕ್ಕೆಗೆ ಅಕ್ಷರಶಃ ಹಾಕಿದರು. ಅವತ್ತಿಂದಲೇ ನಾನು ಸಂಶೋಧನಾ ಕ್ಷೇತ್ರಕ್ಕೆ ಕಾಲಿಟ್ಟಿದ್ದು ಎಂದು ಹೇಳಬಹುದು.

◆ **ವೆಂಕಟಾಚಲಶಾಸ್ತ್ರಿಗಳ ಜೊತೆಗಿನ ಒಡನಾಟ ಹೇಗಿತ್ತು?**

ಅವರ ಒಡನಾಟ ಅದ್ಭುತವಾದದ್ದು. ಅವರು ಕಿರಿಯರಿಗಾಗಲಿ, ಯಾರಿಗಾದರೂ ಆಗಲಿ ಪ್ರೋತ್ಸಾಹಿಸುವ ವಿಧಾನ ಬೇರೊಬ್ಬರಲ್ಲಿ ಕಾಣಲು ಸಾಧ್ಯವಿಲ್ಲ. ಅಕ್ಷರಶಃ ನನ್ನ ಕೈಹಿಡಿದು ನಡೆಸಿದರು.

ನಾನು ಮೊದಲನೇ ಲೇಖನ ಬರೆದಿದ್ದು ಅವರ ಪ್ರೇರಣೆ – ಪ್ರೋತ್ಸಾಹದಿಂದಾಗಿಯೇ. ಅವರು ಅದನ್ನು ತಿದ್ದಿ ಕೊಟ್ಟರು. ಪ್ರಕಟನೆಯೂ ಆಯಿತು. ಆಗ ನಾನು ಬಿ.ಎ. ಮೊದಲ ವರ್ಷದಲ್ಲಿದ್ದೆ.

ನನ್ನ ಎರಡನೇ ಲೇಖನದ ಹೆಸರು, 'ಕನ್ನಡ ಲಕ್ಷಣಗ್ರಂಥಗಳ ಸಂಪಾದನೆ: ಪೂರಕ ವಿಚಾರಗಳು' ಎಂದು. ವೆಂಕಟಾಚಲಶಾಸ್ತ್ರಿಗಳದ್ದೂ 'ಕನ್ನಡ ಲಕ್ಷಣಗ್ರಂಥಗಳ ಸಂಪಾದನೆ' ಅನ್ನುವ ಹೆಸರಿನ ಒಂದು ಲೇಖನ ಇದೆ. ಆ ಲೇಖನ ಬರೆಯುವಾಗ ಅವರ ಗಮನಕ್ಕೆ ಬಾರದೆ ಇದ್ದಂಥದ್ದು, ಅವರು ಬರೆದಾಗ ಮುದ್ರಿತ ಆಗದೇ ಇದ್ದಂಥ ವಿಚಾರಗಳನ್ನೆಲ್ಲ ಕಲೆಹಾಕಿ 'ಪೂರಕ ವಿಚಾರಗಳು' ಅಂತಲೇ ಸ್ಪಷ್ಟಪಡಿಸಿ ಅದನ್ನ ಬರೆದಿದ್ದೆ.

ಅದನ್ನು ನೋಡಿದ ವೆಂಕಟಾಚಲಶಾಸ್ತ್ರಿಗಳು ಅವರು, 'ವ್ಯಾಕರಣ, ಛಂದಸ್ಸು ಇದೆ. ಅಲಂಕಾರ ಇದೆ. ನಿಘಂಟು ಎಲ್ಲಿ?' ಎಂದು ನನ್ನ ಹಸ್ತಪ್ರತಿ ಮೇಲೆ ಪ್ರಶ್ನಾರ್ಥಕ ಚಿಹ್ನೆ ಹಾಕಿದರು. ಆಗ ನಾನು ನಿಘಂಟುಗಳ ಬಗ್ಗೆ ಅಷ್ಟೊಂದು ಹೆಚ್ಚಿಗೆ ಗಮನ ಹರಿಸಿರಲಿಲ್ಲ. 'ನಿಘಂಟುಗಳ ಬಗ್ಗೆಯೂ ಕೆಲಸ ಮಾಡ್ತೀಯಾ?' ಎಂದು ಕೇಳಿದರು. ನಾನು 'ಖಂಡಿತ ಮಾಡ್ತೀನಿ' ಎಂದೆ. ಅವತ್ತಿಂದ ನಿಘಂಟುಗಳ ಬಗ್ಗೆ ಕೆಲಸ ಮಾಡಲು ಶುರುಮಾಡಿದೆ. ಹೀಗೆ ಅವರು ನನ್ನನ್ನು ಈ ಕ್ಷೇತ್ರಕ್ಕೆ ಪರಿಪೂರ್ಣವಾಗಿ ತೊಡಗಿಸಿದರು.

◆ **ನಿಮ್ಮ ಅಧ್ಯಯನ ಕ್ಷೇತ್ರಗಳು ತುಂಬ ವೈವಿಧ್ಯವಾಗಿವೆ. ಇಷ್ಟೆಲ್ಲ ವಿಷಯಗಳ ಬಗ್ಗೆ ಆಸಕ್ತಿ ಬೆಳೆದಿದ್ದು ಹೇಗೆ?**

ಇವೆಲ್ಲವೂ ಅಂತರ್‌ಶಿಸ್ತೀಯ ಅಧ್ಯಯನಗಳು. ಒಂದಕ್ಕೊಂದು ಪೂರಕವಾಗಿಯೇ ಇರುತ್ತವೆ. ಒಂದಕ್ಕೊಂದು ಕೊಂಡಿ ಇರುತ್ತದೆ. ಆದರೆ ಶ್ರಮ ಹೆಚ್ಚು ಇಂಥ ಅಧ್ಯಯನಗಳಲ್ಲಿ. ಶಾಸನಗಳನ್ನು ಅಧ್ಯಯನ ಮಾಡಬೇಕಾದರೆ ಭಾಷೆ ಗೊತ್ತಿರಬೇಕು. ಹಳಗನ್ನಡ ಚೆನ್ನಾಗಿ ಬರಬೇಕು. ಸಂಸ್ಕೃತ ಗೊತ್ತಿರಬೇಕು. ಆ ಕಾಲದ ರಚನೆಯ ಬಂಧ ಗೊತ್ತಿರಬೇಕು.

ನಮ್ಮ ತಲಕಾಡು ಗಂಗರ ಶಾಸನದಲ್ಲಿ 'ಗಜಮಹಾಶಾಸ್ತ್ರೇ ಸಾಕ್ಷಾತ್ ಕರೇಣಾತ್ಮಜಃ' ಅಂತ ಬರುತ್ತದೆ. 'ಗಜಮಹಾಶಾಸ್ತ್ರದಲ್ಲಿ ಇವನು ಸಾಕ್ಷಾತ್ ಪಾಲಕಾಪ್ಯನಂತೆ' ಎಂದು ಇದರ ಅರ್ಥ. ಈಗ